

ಮೇಲೆ ನಿಂತು ಕಣ್ಣು ಹಾಯಿಸಿದರೆ ಹಸಿರು ಮುಕ್ಕಳಿಸುವ ಸುಂದರ ಪರ್ವತ ಶ್ರೇಣಿಗಳು ಹಾಗೂ ಮುಖಕ್ಕೆ ರಾಚುವ ಮೋಡಗಳು ರೋಮಾಂಚನ ಉಂಟು ಮಾಡುತ್ತವೆ.

ಮೇಲಿನ ಕೋಟೆಯಲ್ಲಿ ಶಿಥಿಲವಾಗಿರುವ ಮಹಾದೇವನ ದೇಗುಲ ಹಾಗೂ ಶಿವಾಜಿಯ ನೆಚ್ಚಿನ ದೇವತೆ ಭವಾನಿಯ ದೇಗುಲವಿದೆ. ಈ ದೇಗುಲದ ಜಲಪ್ರನಾಳವು ಗೋಮುಖ ಶೈಲಿಯಲ್ಲಿದೆ. ಈ ಕೋಟೆಗಳ ನಡುವಣ ಆಯಕಟ್ಟಿನ ಜಾಗದಲ್ಲಿ ಸೈನಿಕರಿಗೆ ಹಾಗೂ ಕುದುರೆಗಳಿಗೆ ನೀರುಣಿಸುವ ಸಲುವಾಗಿ ಕೊಳ ನಿರ್ಮಿಸಲಾಗಿದೆ. ಈ ಕೊಳದಲ್ಲಿ ಇಂದಿಗೂ ನೀರು ನಿಂತಿರುವುದನ್ನು ಕಾಣಬಹುದು.

ಪ್ರತಾಪಗಡ ಕೋಟೆಯು ಸಮುದ್ರ ಮಟ್ಟದಿಂದ 1,080 ಮೀಟರ್ ಎತ್ತರದಲ್ಲಿದೆ. ಮೇಲಣ ಕೋಟೆಯ ಒಂದು ಪಾರ್ಶ್ವದಲ್ಲಿ, ಭಾರತದ ಅಂದಿನ ಪ್ರಧಾನಿ ಜವಾಹರ್‌ಲಾಲ್ ನೆಹರು ಅವರು 1957 ನವೆಂಬರ್ 30ರಂದು 17 ಅಡಿ ಎತ್ತರದ ಅಶ್ವಾರೂಢ ಶಿವಾಜಿಯ ಪ್ರತಿಮೆಯನ್ನು ಅನಾವರಣ ಮಾಡಿದ್ದಾರೆ.

ಭಾರತೀಯ ಇತಿಹಾಸದಲ್ಲಿ ಪ್ರಮುಖವಾಗಿ ದಾಖಲಾಗಿರುವ ಪ್ರತಾಪಗಡ ಕೋಟೆ ಶಿವಾಜಿಯ ಪ್ರೀತಿಯ ಅಡಗುದಾಣವೂ ಆಗಿತ್ತು. ಹಲವು ದಾಳಿಯ ಸಂದರ್ಭಗಳಲ್ಲಿ ತನ್ನ ಪ್ರಾಣ ರಕ್ಷಣೆಗೆ ಕಾರಣವಾದ ಈ ಕೋಟೆಯನ್ನು ಶಿವಾಜಿ ಬಹುವಾಗಿ ಪ್ರೀತಿಸುತ್ತಿದ್ದನಂತೆ. ದಖ್ಖನ್ನಿನ ಸುಲ್ತಾನರ ಆಳ್ವಿಕೆ ಮತ್ತು ಮೊಘಲ್ ಸಾಮ್ರಾಟನ ಉತ್ತರ ಭಾರತದ ದಾಳಿಗಳನ್ನು ಅಡಗಿಸುವಲ್ಲಿ ಶಿವಾಜಿ ಯಶಸ್ವಿಯಾದದ್ದು, 17ನೇ ಶತಮಾನದ ದ್ವಿತೀಯಾರ್ಧ ಭಾಗದಲ್ಲಿ ಮರಾಠಾ ಶಕ್ತಿಯು ಏಳಿಗೆ ಹೊಂದುವುದಕ್ಕೆ ಸದವಕಾಶವನ್ನು ಕಲ್ಪಿಸಿಕೊಟ್ಟಿತ್ತು. ಬಿಜಾಪುರದ ಸುಲ್ತಾನನಂತೂ ಶಿವಾಜಿಯನ್ನು ಸದೆಬಡಿಯಲು ಸತತ ಪ್ರಯತ್ನಗಳನ್ನು ಮಾಡುತ್ತಿದ್ದ.

ಶಿವಾಜಿಯನ್ನು ಜೀವಂತವಾಗಿ ಸೆರೆಹಿಡಿದು ಅಥವಾ ಕೊಂದು ತರಲೆಂದು ಬಿಜಾಪುರದ ಸುಲ್ತಾನ ತನ್ನ ಮಹಾದಂಡ ನಾಯಕನಾದ ಅಫ್ಜಲ್ ಖಾನ್‌ನ ನಾಯಕತ್ವದಲ್ಲಿ ಕ್ರಿ.ಶ. 1659ರ ನವೆಂಬರ್ 10ರಂದು ದೊಡ್ಡ ಸೈನ್ಯವೊಂದನ್ನು ಕಳುಹಿಸುತ್ತಾನೆ. ಸೈನ್ಯ ಶಿವಾಜಿಯ ಕೋಟೆಗೆ ಮುತ್ತಿಗೆ ಹಾಕುತ್ತದೆ. ಮುತ್ತಿಗೆಗೆ ಬಗ್ಗದ ಶಿವಾಜಿ, ಪ್ರತಾಪಗಡ ಕೋಟೆಯಲ್ಲಿ ರಕ್ಷಣೆ ಪಡೆದು ಕೋಟೆಯಿಂದ ಹೊರಬರುವುದೇ ಇಲ್ಲ. ಕೊನೆಗೆ ಮರಾಠಾ ಬ್ರಾಹ್ಮಣ ಕೃಷ್ಣಾಜಿ ಭಾಸ್ಕರ ಕುಲಕರ್ಣಿಯ ಮೂಲಕ ಅಫ್ಜಲ್‌ಖಾನ್ ಸಂಧಾನ ಯತ್ನ ನಡೆಸಿದ.

ಸಂಧಾನ ಸೂತ್ರದಂತೆ ಅಫ್ಜಲಖಾನನನ್ನು ಏಕಾಂಗಿಯಾಗಿ, ನಿರಾಯುಧನಾಗಿ ಭೇಟಿಯಾಗಲು ಶಿವಾಜಿ ಒಪ್ಪಿಕೊಂಡ. ಈ ಭೇಟಿಗೆ ಖಡ್ಗವಿಲ್ಲದೆ ಕುದುರೆ ಮೇಲೆ ತೆರಳುತ್ತಿದ್ದ ಶಿವಾಜಿಯನ್ನು ಅಂಗರಕ್ಷಕನೊಬ್ಬ ತಡೆದು ನಿಲ್ಲಿಸಿದ. ಆತನ ಸಲಹೆಯಂತೆ ಕೊನೆಕ್ಷಣದಲ್ಲಿ ಶಿವಾಜಿ ಬೆರಳುಗಳಿಗೆ ವ್ಯಾಘ್ರನಖ ಧರಿಸಿಕೊಂಡ. ಭೇಟಿಯಾದ ಸಂದರ್ಭದಲ್ಲಿ ಅಫ್ಜಲಖಾನ್, ಶಿವಾಜಿಯನ್ನು ತಬ್ಬಿಕೊಳ್ಳುವಂತೆ ನಟಿಸಿ ಕುತ್ತಿಗೆ ಹಿಚುಕಲು ಯತ್ನಿಸಿದ. ತಕ್ಷಣ ವ್ಯಾಘ್ರನಖದಿಂದ ಅಫ್ಜಲಖಾನ್‌ನ ಬೆನ್ನಿಗೆ ಚುಚ್ಚಿ ಬೀಳಿಸಿದ ಶಿವಾಜಿ, ಪ್ರತಾಪಗಡ ಕೋಟೆಯ ಗುಪ್ತಮಾರ್ಗದ ಮೂಲಕ ಅಲ್ಲಿಂದ ತಪ್ಪಿಸಿಕೊಂಡ. ಅನಂತರ ತನ್ನ ಸೈನ್ಯದ ಸಹಾಯದಿಂದ ಬಿಜಾಪುರದ ಸೈನ್ಯವನ್ನು ಸೋಲಿಸಿ ಅಲ್ಲಿನ ಸುಲ್ತಾನನೊಂದಿಗೆ ಒಪ್ಪಂದ ಮಾಡಿಕೊಂಡು ಸ್ವತಂತ್ರ ರಾಜನಾದ.

ಶಿವಾಜಿಯು ಯುದ್ಧತಂತ್ರಗಳಲ್ಲಿ ನಿಪುಣನಾಗಿದ್ದ. ಸರ್ವಧರ್ಮಗಳ ಜನರ ಪ್ರೀತಿಗೆ ಪಾತ್ರನಾಗಿದ್ದ. ಆತನ ಸೇನೆಯಲ್ಲಿ 12 ಸೇನಾಪತಿಗಳು ಮುಸ್ಲಿಮರಾಗಿದ್ದರು. ಅಫ್ಜಲಖಾನ್ ನನ್ನು ಎದುರಿಸುವಾಗ ವ್ಯಾಘ್ರನಖ ಧರಿಸಲು ಸೂಚಿಸಿದ ಅಂಗರಕ್ಷಕ ಗೂಢಚಾರನೂ ಮುಸ್ಲಿಮನಾಗಿದ್ದ ಎನ್ನುವ ಕುತೂಹಲಕರ ವಿವರಗಳು ಇತಿಹಾಸದಲ್ಲಿ ದಾಖಲಾಗಿವೆ. ಪ್ರತಾಪಗಡ ಕೋಟೆ ಶಿವಾಜಿಯ ರಾಜಕೀಯ ತಂತ್ರಗಳ ಪಾಲಿಗೆ ಪ್ರಮುಖವಾಗಿದೆ. ಈ ರೋಚಕ ಘಟನೆಗೆ ಸಾಕ್ಷಿಯಾದ ಕೋಟೆ ತನ್ನ ದೊರೆಯ ನೋವು, ವಿಜಯ ಎಲ್ಲವನ್ನು ತನ್ನ ಒಡಲಾಳದಲ್ಲಿ ಹುದುಗಿಸಿಕೊಂಡು ಈಗ ನಮ್ಮ ಮುಂದೆ ಮೌನವಾಗಿ ನಿಂತಿದೆ.

ಮರಾಠರ ಇತಿಹಾಸದಲ್ಲಿ ಕೋಟೆಗಳಿಗೆ ಅತಿಮುಖ್ಯವಾದ ಸ್ಥಾನವಿತ್ತು. ಅವುಗಳಲ್ಲಿ ಸೈನ್ಯಗಳನ್ನು ಸುವ್ಯವಸ್ಥಿತವಾಗಿ ಇಡಲು ಗಮನ ನೀಡಲಾಗುತ್ತಿತ್ತು. ಶಿವಾಜಿಯ ಸಾಮ್ರಾಜ್ಯದಲ್ಲಿ ಇಂತಹ ಒಟ್ಟು 140 ಕೋಟೆಗಳಿದ್ದು, ಅವುಗಳಿಂದಲೇ ಸಾಕಷ್ಟು ಆದಾಯ ಬರುತ್ತಿತ್ತು ಎನ್ನಲಾಗಿದೆ.

ಶಿವಾಜಿಯು ಅಪ್ರತಿಮ ವೀರಯೋಧ ಮತ್ತು ಯಶಸ್ವಿ ಸೇನಾನಿ ಮಾತ್ರವಲ್ಲದೇ, ಜನತೆಗೆ ಜ್ಞಾನ ಬೋಧನೆಯನ್ನು ನೀಡುವ ದೊರೆಯೂ ಆಗಿದ್ದ. ಇತಿಹಾಸಕಾರ ರಾಲಿನ್ಸನ್ ಉಲ್ಲೇಖದಂತೆ, ಶಿವಾಜಿ ಮಹಾರಾಜ ನೆಪೋಲಿಯನ್ನನಂತೆ ಒಬ್ಬ ಪ್ರಸಿದ್ಧ ಆಡಳಿತ ತಜ್ಞನಾಗಿದ್ದ. ಸಮರ್ಥ ಸೇನಾ ನಾಯಕನೂ, ರಾಜತಾಂತ್ರಿಕ ನಿಪುಣನೂ ಆಗಿದ್ದ.

ಪ್ರತಾಪಗಡ ಕೋಟೆಗೆ ಪುಣೆಯಿಂದ ರಾಜ್ಯ ರಸ್ತೆ ಸಾರಿಗೆ ಬಸ್ಸಿನ ಸೌಲಭ್ಯವಿದೆ. 120 ಕಿ.ಮೀ. ದೂರವಿರುವ ಮಹಾಬಲೇಶ್ವರಕ್ಕೆ ಬಂದರೆ, ಅಲ್ಲಿ ಖಾಸಗಿ ಟ್ಯಾಕ್ಸಿಗಳು ನಿಮ್ಮ ಸುತ್ತಾಟಕ್ಕೆ ಸಿಗುತ್ತವೆ. ಮಹಾಬಲೇಶ್ವರದಿಂದ 22 ಕಿ.ಮೀ. ದೂರವಿರುವ ಪ್ರತಾಪಗಡ ಹಾಗೂ ಸುತ್ತಮುತ್ತಲ ಪ್ರೇಕ್ಷಣೀಯ ಸ್ಥಳಗಳನ್ನು ನೀವು ನೋಡಬಹುದು. ಮಳೆಗಾಲದಲ್ಲಿ ಬಂದರೆ ಹಲವಾರು ಜಲಪಾತಗಳೂ ಕಣ್ಮನ ಸೆಳೆಯುತ್ತವೆ. ಮಹಾಬಲೇಶ್ವರದಲ್ಲಿ ಉತ್ತಮ ವಸತಿ ಹಾಗೂ ಊಟದ ಸೌಲಭ್ಯವಿದೆ.



ಶಿವಾಜಿಯ ಅಶ್ವಾರೂಢ ಪ್ರತಿಮೆ



ಭವಾನಿ ದೇಗುಲದ ಗೋಮುಖ ಜಲಪ್ರನಾಳ